

ಎಲ್ ಕ್ಯಾಲಾಫೆಟೆಯಿಂದ ಗ್ಲೇಸಿಯರ್ ಹಾದಿ



ಕ್ಯಾಲಾಫೆಟೆ ಹಣ್ಣು



ಅಪ್ಪರ್ ಗೀಸ್ (ಬಾತುಗಳು)

ಕಾಣುವ ನೀರ್ಗಲ್ಲುಗಳ ನಾನಾ ಆಕಾರಗಳನ್ನು ಚಳಿಗೆ ನಡುಗುತ್ತಲೇ ಫೋಟೊ ಕ್ಲಿಕ್ಕಿಸುವುದು, ಸೆಲ್ಫೀ ತೆಗೆಯುವ ಪ್ರವಾಸಿಗರ ಆನಂದ ಇಲ್ಲಿ ಮುಗಿಲು ಮುಟ್ಟುತ್ತದೆ. ಇಲ್ಲಿರುವ ಗ್ಲೇಸಿಯರ್‌ಗಳಿಂದ ಹುಟ್ಟಿರುವ ಅರ್ಜೆಂಟೀನೊ ಸರೋವರ ಗ್ಲೇಸಿಯರ್‌ಗಳಿಂದಾಗಿಯೇ ಹಸಿರು ನೀಲಿ ಮಿಶ್ರಿತ ವಿಶೇಷ ಬಣ್ಣವನ್ನು ಹೊಂದಿದೆ. 1560 ಚ.ಕಿ.ಮೀ. ವ್ಯಾಪ್ತಿ ಹೊಂದಿರುವ ಈ ಸರೋವರ, ದಕ್ಷಿಣ ಅಮೆರಿಕದ ಮೂರನೇ ಅತಿದೊಡ್ಡ ಸರೋವರ ಮತ್ತು ಸಂತಾಕ್ರೂಸ್ ನದಿಯ ಮೂಲ ಸಹ ಆಗಿದೆ.

## ಕ್ಯಾಲಾಫೆಟೆ: ಹಣ್ಣಿನಿಂದ ಹಳ್ಳಿ...

ಅರ್ಜೆಂಟೀನೊ ಸರೋವರದ ದಕ್ಷಿಣ ದಂಡೆಯಲ್ಲಿನ ಪುಟ್ಟ ಹಳ್ಳಿ ಎಲ್ ಕ್ಯಾಲಾಫೆಟೆ, ಇಂದು ಏರುಗತಿಯಲ್ಲಿ ಸಾಗುತ್ತಿರುವ ಅರ್ಜೆಂಟೀನಾ ಪ್ರವಾಸೋದ್ಯಮದ ಕೂಸಾಗಿ ಬೆಳೆದು ಸುಂದರ ಪಟ್ಟಣವಾಗಿದೆ. ಪೆರಿಟೊ ಮೊರಿನೊ ಗ್ಲೇಸಿಯರ್ ವೀಕ್ಷಣೆಗೆ ಬರುವ ಬಹುತೇಕ ಪ್ರವಾಸಿಗರು ಈ ಪುಟ್ಟ ಹಾಗೂ ಸುಂದರ ಊರಿನಲ್ಲಿ ತಂಗುತ್ತಾರೆ. ಇಲ್ಲಿಂದ ಗ್ಲೇಸಿಯರ್ 80 ಕಿ.ಮೀ. ದೂರದಲ್ಲಿದೆ. ಗ್ಲೇಸಿಯರ್‌ಗಳ ಬಗ್ಗೆಯೇ ಇಲ್ಲೊಂದು ಮ್ಯೂಸಿಯಂ ಮಾಡಿದ್ದಾರೆ. 2000 ಇಸವಿಯಲ್ಲಿ ವಿಮಾನ ನಿಲ್ದಾಣ ಆದ ನಂತರ ಎಲ್ ಕ್ಯಾಲಾಫೆಟೆಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದೆ.

ಕ್ಯಾಲಾಫೆಟೆ ಹಣ್ಣಿನಿಂದಾಗಿ ಈ ಊರಿಗೆ ‘ಎಲ್ ಕ್ಯಾಲಾಫೆಟೆ’ ಎನ್ನುವ ಹೆಸರು ಬಂದಿದೆ. ಮಳೆ ಪ್ರಮಾಣ ಅತ್ಯಲ್ಪವಾದ್ದರಿಂದ, ಒಣ ಹುಲ್ಲಿನ ಸಣ್ಣ ಸಣ್ಣ ಗುಚ್ಛವನ್ನು ನೆಲದಲ್ಲಿ ಹರಡಿದಂತಿರುವ ಹಾಗೂ ಅಲ್ಲಲ್ಲಿ ಮುಳ್ಳಿನ ಪೊದೆಗಿಡಗಳಿರುವ ಒಣ ಭೂಮಿಯಿದು. ನವೆಂಬರ್‌ನಿಂದ ಮಾರ್ಚ್ ತಿಂಗಳ ನಡುವೆ, ಕ್ಯಾಲಾಫೆಟೆ (ಬರ್ಬೆರಿಸ್ ಬುಕ್ಸಿಫೋಲಿಯಾ) ಎಂಬ ಹೆಸರಿನ ಮುಳ್ಳುಪೊದೆಗಳಲ್ಲಿ ಕಡು ನೀಲಿ ಅಥವಾ ಗಾಢ ನೇರಳೆ ಬಣ್ಣದ ಪುಟ್ಟಪುಟ್ಟ ಹಣ್ಣುಗಳನ್ನು ನಾವು ಅಲ್ಲಿ ಕಾಣಬಹುದು.

ದಕ್ಷಿಣ ಅಮೆರಿಕದ ತುತ್ತ ತುದಿಯಲ್ಲಿ ಅರ್ಜೆಂಟೀನಾ ದೇಶದ ದಕ್ಷಿಣ ಭಾಗದಲ್ಲಿರುವ ಪ್ಯಾಟಗೋನಿಯಾ ಪ್ರಾಂತ್ಯದಲ್ಲಿ ಮಾತ್ರ ರುಚಿಯಾದ ಕ್ಯಾಲಾಫೆಟೆ ಹಣ್ಣುಗಳ ಪೊದೆಗಳು ಕಂಡುಬರುತ್ತವೆ. ಈ ಹಣ್ಣನ್ನು ಒಮ್ಮೆ ತಿಂದವರು, ಖಂಡಿತ ಮತ್ತೊಮ್ಮೆ ಈ ಸುಂದರ ಪ್ರಾಂತ್ಯಕ್ಕೆ ಭೇಟಿ ನೀಡುತ್ತಾರೆ ಎಂಬುದಾಗಿ ಸ್ಥಳೀಯ ಜನಪದರ ನಂಬುಗೆ. ಈ ನಂಬಿಕೆಯ ಸುತ್ತ ಕಥೆಗಳೂ ಇವೆ.

